ವಿಜಯವಾಣಿ
ಕನ್ನಡಿಗರ ಧ್ವನಿ

# ಖಗೋಳ ವಿಜ್ಞಾನಕ್ಕೆ ಆರ್ಯಭಟ ಬುನಾದಿ

## ಖ್ಯಾತ ವಿಜ್ಞಾನಿ ಪ್ರೊ. ರೊದ್ದಂ ನರಸಿಂಹ ಅಭಿಮತ




ಮಿಥಿಕ್ ಸೊಸೈಟಿಯಲ್ಲಿ ನಡೆದ 'ಪರಾಶರತಂತ್ರ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಾ.ಎಂ.ಕೆ.ಎಲ್.ಎನ್. ಶಾಸ್ತ್ರಿ, ಡಾ. ಚೆನ್‌ರಾಜ್ ರಾಯ್ ಚಂದ್, ಪ್ರೊ. ರೊದ್ದಂ ನರಸಿಂಹ, ಡಾ. ಸುಬ್ಬರಾಯಪ್ಪ ಮತ್ತಿತರರು ಭಾಗವಹಿಸಿದ್ದರು.

**ಬೆಂಗಳೂರು:** ವೇದಗಳ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಖಗೋಳ ವಿಜ್ಞಾನಕ್ಕೆ ಭದ್ರ ಬುನಾದಿ ಹಾಕಿದವರು ಆರ್ಯಭಟ. ಅದೇ ತಳಹದಿಯ ಮೇಲೆ ನಾವು ಇಂದಿಗೂ ಮುಂದುವರಿಯುತ್ತಿದ್ದೇವೆ ಎಂದು ಖ್ಯಾತ ವಿಜ್ಞಾನಿ ಪ್ರೊ. ರೊದ್ದಂ ನರಸಿಂಹ ಹೇಳಿದರು.

ಶನಿವಾರ ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ನಡೆದ 'ಪರಾಶರತಂತ್ರ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೇದಗಳ ಕಾಲದಲ್ಲೇ ಖಗೋಳ ವಿಜ್ಞಾನದ ಕುರುಹುಗಳಿವೆ. ವೇದಾಂಗ ಜ್ಯೋತಿಷ್ಯ ಎಂಬ ದಾಖಲೆಯಲ್ಲಿ ಖಗೋಳ ವಿಜ್ಞಾನದ ಉಲ್ಲೇಖವಿದೆ. ಆದರೆ ಆರ್ಯಭಟ ಖಗೋಳ ವಿಜ್ಞಾನಕ್ಕೆ ಒಂದು ಸ್ಪಷ್ಟ ರೂಪ ಕೊಟ್ಟರು. ಆ ಮಾರ್ಗದಲ್ಲೇ ನಾವು ಈಗ ಮುನ್ನಡೆದಿದ್ದೇವೆ. ಹಿಂದಿನ ಹಾದಿ ಅರಿಯದೆ ಖಗೋಳ ವಿಜ್ಞಾನವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದರು.

'ಖಗೋಳ ವಿಜ್ಞಾನದ ಕೌತುಕಗಳನ್ನು ತಣಿಸುವ ಪ್ರಾಚೀನ ಸಂಸ್ಕೃತ ಪುಸ್ತಕ, 'ಪರಾಶರತಂತ್ರ'ವನ್ನು ಇಂಗ್ಲಿಷ್‌ಗೆ ಅನುವಾದಿಸಿರುವುದು ಸಂತಸದ ವಿಷಯ. ಆರ್.ಎನ್. ಅಯ್ಯಂಗಾರ್ ಪುನಾರಚನೆ ಮಾಡಿರುವ ಈ ಕೃತಿ, ಖಗೋಳ ವಿಜ್ಞಾನದ ಹಲವು ಹಂತದ ಬೆಳವಣಿಗೆಯ ಮೇಲೆ ಬೆಳಕು ಚೆಲ್ಲುವಲ್ಲಿ ಸಹಕಾರಿಯಾಗಿದೆ ' ಎಂದರು.

ಇಂಟರ್‌ನ್ಯಾಷನಲ್ ಯುನಿಯನ್ ಆಫ್ ಹಿಸ್ಟರಿ ಅಂಡ್ ಫಿಲಾಸಫಿ ಆಫ್ ಸೈನ್ಸ್ ಸಂಸ್ಥೆಯ ಮಾಜಿ ಅಧ್ಯಕ್ಷ ಡಾ. ಸುಬ್ಬರಾಯಪ್ಪ ಮಾತನಾಡಿ, 'ನಕ್ಷತ್ರ ವಿದ್ಯೆ' (ವೇದಗಳ ಕಾಲದ ಖಗೋಳ ವಿಜ್ಞಾನ) ಮತ್ತು ಆಧುನಿಕ ಖಗೋಳ ವಿಜ್ಞಾನದ ಸಮ್ಮಿಲನವೇ ಭಾರತದ ಖಗೋಳ ವಿಜ್ಞಾನ ಎಂದು ವಿಶ್ಲೇಷಣೆ ಮಾಡಿದರು. ಭಾರತದ ಖಗೋಳ ವಿಜ್ಞಾನ, ವಿದೇಶದ ಪ್ರಭಾವಕ್ಕೆ ಒಳಗಾಗಿದೆ ಎನ್ನುವುದನ್ನು ಸುಲಭವಾಗಿ ಒಪ್ಪಲು ಸಾಧ್ಯವಿಲ್ಲ ಎಂದರು. ಮಿಥಿಕ್ ಸೊಸೈಟಿ ಅಧ್ಯಕ್ಷ ಡಾ. ಎಂ.ಕೆ.ಎಲ್.ಎನ್. ಶಾಸ್ತ್ರಿ, ಜೈನ್ ವಿವಿ ಟ್ರಸ್ಟ್‌ನ ಅಧ್ಯಕ್ಷ ಡಾ. ಚೆನ್‌ರಾಜ್ ರಾಯ್ ಚಂದ್ ಮತ್ತಿತರರು ಉಪಸ್ಥಿತರಿದ್ದರು.